ಸಾಕ್ಷಿಯನ್ನು ದಿ: 13.03.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನಾನು 08.11.1987 ರಂದು ಜನಿಸಿರುತ್ತೇನೆ. 2 ನೇ ವಾದಿ ದಿಃ 01.06.1989 ರಂದು ಜನಿಸಿರುತ್ತಾರೆ. 2 ನೇ ಪ್ರತಿವಾದಿ ಫೆಬ್ರವರಿ 1992 ನೇ ಸಾಲಿನಲ್ಲಿ ಜನಿಸಿರುತ್ತಾರೆ. 3 ನೇ ಪ್ರತಿವಾದಿ ದಿಃ 01.04.1995 ರಂದು ಜನಿಸಿರುತ್ತಾರೆ. 2005 ರಲ್ಲಿ ನಾನು ವಯಸ್ಕಳಾಗಿರುತ್ತೇನೆ. 2 ನೇ ವಾದಿ 2007 ರಲ್ಲಿ ವಯಸ್ಕನಾಗಿರುತ್ತಾನೆ. ನನಗೆ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಏನು ವ್ಯವಹಾರ ನಡೆದಿದೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಇತ್ತೀಚೆಗೆ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ನಾನು 2020 ರಲ್ಲಿ ದಾವಾ ಆಸ್ತಿಗೆ ಸಂಬಂದಪಟ್ಟ ನಡವಳಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. 2020 ರ ಹಿಂದೆ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಯಾವ ಯಾವ ವ್ಯವಹಾರಗಳು ನಡೆದಿರುತ್ತವೆಂದು ತಿಳಿದುಕೊಂಡಿರಲಿಲ್ಲ. ನನ್ನ ತಂದೆ ಕೆಟ್ಟ ಹವ್ಯಾಸಗಳಾದ ಕುಡಿತ ಮತ್ತು ಜೂಜಾಟಕ್ಕೆ ಬಲಿಯಾಗಿದ್ದ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ನನ್ನ ತಂದೆ 4 ನೇ ಪ್ರತಿವಾದಿಗೆ 2006 ರಲ್ಲಿ ದಾವಾ ಐಟಂ ನಂ.3 ರ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದು ತಿಳಿದುಕೊಂಡಿರುತ್ತೇನೆ. 4 ನೇ ಪ್ರತಿವಾದಿ ಏನೆಂದು ತಕರಾರು ಸಲ್ಲಿಸಿರುತ್ತಾರೆಂದು ನಾನು ಗಮನಿಸಿಲ್ಲ. ದಾವಾ ಐಟಂ ನಂ.3 ರ ಆಸ್ತಿಯು ಈಗ 4 ನೇ ಪ್ರತಿವಾದಿಯ ಮಗನಾದ ಶ್ರೇಯಸ್ ಹೆಸರಿನಲ್ಲಿರುತ್ತದೆ. 4 ನೇ ಪ್ರತಿವಾದಿ ತನ್ನ ಮಗನಿಗೆ ದಾವಾ ಐಟಂ ನಂ.3 ರ ಆಸ್ತಿಯನ್ನು ದಾನಪತ್ರದ ಮುಖಾಂತರ ಕೊಟ್ಟಿರುತ್ತಾರೆ. ಸದರಿ ಶ್ರೇಯಸ್ ನನ್ನು ಈ ದಾವೆಯಲ್ಲಿ ಪಕ್ಷಕಾರನನ್ನಾಗಿ ಮಾಡಿಲ್ಲ. 2019 ರಲ್ಲಿ 4 ನೇ ಪ್ರತಿವಾದಿ ದಾನ ಬರೆದುಕೊಟ್ಟಿರುತ್ತಾರೆ. ಈ ದಾವೆಯನ್ನು 2020 ರಲ್ಲಿ ಸಲ್ಲಿಸಿರುತ್ತೇನೆ. ನಮಗೆ ದಾವಾ ಐಟಂ ನಂ.3 ರ ಆಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 4 ನೇ ಪ್ರತಿವಾದಿಗೆ 2004 ರಲ್ಲಿ ಕ್ರಯ ಕರಾರು ಬರೆದುಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಮ್ಮ ತಂದೆಗೆ ದಾವಾ ಸ್ವತ್ತುಗಳು ಭಾಗಾಂಶದಲ್ಲಿ ಬಂದಿರುತ್ತದೆ. ನಮ್ಮ ತಂದೆ ಹಾಗೂ ನಮ್ಮ ದೊಡ್ಡಪ್ಪ 2004 ರಲ್ಲಿ ಒಟ್ಟು ಕುಟುಂಬದಲ್ಲಿದ್ದರು ಎಂದರೆ ಸರಿಯಲ್ಲ. 2005-06 ರಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಗೊತ್ತಿಲ್ಲ. ದಿಃ 15.06.2006 ರಂದು ನನ್ನ ತಂದೆ

ದಾವಾ ಐಟಂ ನಂ.3 ರ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ನಾನು ಈ ದಾವೆಯನ್ನು ಸ್ವತ್ತು ಮಾರಾಟ ಮಾಡಿ 12 ವರ್ಷ ತೀರಿದ ನಂತರ ಸಲ್ಲಿಸಿರುತ್ತೇನೆಂದರೆ ಸರಿ. ದಾವಾ ಐಟಂ ನಂ.3 ರ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನಮ್ಮ ಕುಟುಂಬದ ನಿರ್ವಹಣೆಗೋಸ್ಕರ ದಾವಾ ಐಟಂ ನಂ.3 ರ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿ ಅಂಗವಿಕಲೆ ಎಂಬ ಕುರಿತು ನನ್ನ ದಾವೆಯಲ್ಲಿ ತಿಳಿಸಿಲ್ಲ. ನನ್ನ ತಾಯಿ ನನ್ನ ತಂದೆ ಕುಡಿದು ತೊಂದರೆ ಮಾಡುತ್ತಾನೆ ಮತ್ತು ನಮ್ಮನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂದು ಯಾವುದೇ ದೂರು ಕೊಟ್ಟಿಲ್ಲ ಮತ್ತು ಯಾವುದೇ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಮ್ಮ ವಿದ್ಯಾಭ್ಯಾಸಕ್ಕಾಗಿ ಮತ್ತು ನಮ್ಮ ಕುಟುಂಬದ ಅವಶ್ಯಕತೆಗಾಗಿ ನನ್ನ ತಂದೆ ದಿಃ 15.06.2006 ರಂದು ದಾವಾ ಐಟಂ ನಂ.3 ರ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ 2 ನೇ ವಾದಿಗೆ ಶಿಕ್ಷಣ ಕೊಡಿಸಿದರೂ ಸಹ 2 ನೇ ವಾದಿ ಓದದೆ ಶಾಲೆ ಬಿಟ್ಟಿರುತ್ತಾನೆಂದರೆ ಸರಿಯಲ್ಲ. ನನ್ನ ತಮ್ಮ ಯಾವುದೇ ಪ್ರಿಂಟಿಂಗ್ ಪ್ರೆಸ್ ನಲ್ಲಿ ಕೆಲಸ ಮಾಡುತ್ತಿಲ್ಲ ಹಾಗೂ ಅವನಿಗೆ ಯಾವುದೇ ಕೋವಿಡ್ ಖಾಯಿಲೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಕೋವಿಡ್ ಬಂದ ಕುರಿತು ದಾಖಲಾತಿ ಹಾಜರು ಪಡಿಸಿಲ್ಲ. 4 ನೇ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸಲು ನಾವುಗಳು ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ದಾವೆಗೆ ಪೂರಕವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ